ಶ್ರೀ ಎಂ. ರಾಮಪ್ಪ —ಪ್ರೊಫೆಸರ್ ಆಗಿದ್ದವರಿಗೆ ಕಡಿಮೆ ಪನಿಷ್‌ಮೆಂಟ್ ಮಾಡುತ್ತೀರಿ. ವೈದ್ಯರು ಎಂದು ಕಡಿಮೆ ಪನಿಷ್‌ಮೆಂಟ್ ಕೊಟ್ಟರೆ ತಪ್ಪಾಗುತ್ತದೆ. ಅವರು ದೊಡ್ಡ ಸಂಬಳದವರು ಎಂದು ದೊಡ್ಡ ತಪ್ಪು ಮಾಡಿದರೂ ಬಿಟ್ಟು ಬಿಡುತ್ತೀರಿ. ಅವರ ಬಗ್ಗೆ ತಾವು ಸೀರಿಯಸ್ ಆಗಿ ಕ್ರಮ ತೆಗೆದುಕೊಳ್ಳುತ್ತಿಲ್ಲವೆಂದು ಹೇಳುತ್ತೇನೆ.

(ಉತ್ತರವಿಲ್ಲ)

ಡಾ॥ ಎಲ್. ಮುಲಕ ರೆಡ್ಡಿ.—ಬಳ್ಳಾರಿ ಮೆಡಿಕಲ್ ಕಾಲೇಜ್ ಆಸ್ಪತ್ರೆಯನ್ನು ಬೇರೆ ಆಸ್ಪತ್ರೆಗಳಂತೆ ಪರಿಗಣಿಸುವುದಕ್ಕೆ ಬರುವುದಿಲ್ಲ. ಮೆಡಿಕಲ್ ಕಾಲೇಜ್ ಆಸ್ಪತ್ರೆಯಲ್ಲಿ ಕೆಲಸ ಮಾಡುವವರಂ ರೋಗಿಗಳ ಶುಶ್ರೂಷೆ ಮಾಡುವುದಲ್ಲದೆ ಹೊಸ ವೈದ್ಯರಿಗೆ ತರಬೇತಿಯನ್ನು ಕೂಡ ಕೊಡಬೇಕಾಗುತ್ತದೆ ಅಲ್ಲಿ ಒಟ್ಟು ವೈದ್ಯ ಉಪನ್ಯಾಸಕರ ಸಂಖ್ಯೆ ೧೪೦ ಇರುತ್ತದೆ. ಆದರಲ್ಲಿ ೮೨ ಹುದ್ದೆಗಳು ಖಾಲಿ ಇವೆ. ಅವು ಸುಮಾರು ೪-೬ ವರ್ಷಗಳಿಂದ ಖಾಲಿ ಇವೆ. ಸಚಿವರು ನಿದ್ದೆ ಮಾಡುತ್ತಿದ್ದಾರೆಯೆ ? ನಿರ್ದೇಶಕರು ನಿದ್ದೆ ಮಾಡುತ್ತಿದ್ದಾರೆಯೆ ಎಂದು ಕೇಳುತ್ತೇನೆ. ಆಸ್ಪತ್ರೆಯಲ್ಲಿ ವೈದ್ಯರಿಲ್ಲದಿದ್ದರೆ ಜನರ ಆರೋಗ್ಯ ಹೇಗೆ ಸಂರಕ್ಷಣೆಯಾಗುತ್ತದೆ ? ಇದಕ್ಕೆ ಸರ್ಕಾರ ಏನು ವ್ಯವಸ್ಥೆ ಮಾಡಿದೆ ?

ಶ್ರೀಮತಿ ಮನೋರಮಾ ವೀಧ್ವರಾಜ್ —೧೯೮೨ರ ಲೋಕಸೇವಾ ಆಯೋಗದ ನೇಮಕಾತಿ ನಿಯಮಾವಳಿ ವಿರುದ್ಧ ಕೆಲವರು ಕರ್ನಾಟಕದ ಶ್ರೇಷ್ಠ ನ್ಯಾಯಾಲಯಕ್ಕೆ ಹೋಗಿದ್ದರು. ಆಲ್ಲಿ ಸರ್ಕಾರ ತನ್ನ ಕೇಸನ್ನು ಕಳೆದುಕೊಂಡಿದೆ. ಈಗ ಆದು ಉಚ್ಚ ನ್ಯಾಯಾಲಯದಲ್ಲಿರುವುದರಿಂದ ನಾವು ಅದನ್ನು ತೆರವು ಮಾಡಿಸುವುದಕ್ಕೆ ಸೂಕ್ತ ಕ್ರಮ ಕೈಗೊಳ್ಳುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಸುಪ್ರೀಂ ಕೋರ್ಟಿನಲ್ಲಿರತಕ್ಕ ಕೇಸಿಗೂ ಇದಕ್ಕೂ ಏನೂ ಸಂಬಂಧವಿಲ್ಲ. ರಾಜ್ಯದಲ್ಲಿನ ಒಟ್ಟು ೩೫೦ ಜನ ವೈದ್ಯಾಧಿಕಾರಿಗಳು ಹೊರ ದೇಶದಲ್ಲಿ ಕೆಲಸ ಮಾಡುತ್ತಿದ್ದಾರೆ. ಬಳ್ಳಾರಿ ಕಾಲೇಜಿನ ವೈದ್ಯಾಧಿಕಾರಿಗಳು ಕೂಡ ಬೇರೆ ಬೇರೆ ದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರನ್ನು ಈಗಾಗಲೇ ಕೆಲಸದಿಂದ ತೆಗೆದುಹಾಕಬೇಕಾಗಿತ್ತು. ಇವತ್ತಿನ ದಿವಸ ಅನೇಕ ಜಿಲ್ಲಾ ಕೇಂದ್ರಗಳಲ್ಲಿರತಕ್ಕ ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿಗಳು ಇಲ್ಲ. ಆದರಲ್ಲಿ ಬಳ್ಳಾರಿ, ಶಿವಮೊಗ್ಗ, ದಕ್ಷಿಣ ಕನ್ನಡ ಎಲ್ಲಾ ಸೇರಿವೆ. ಈ ರೀತಿ ಹೊರಗಡೆ ಹೋಗಿ ಕೆಲಸ ಮಾಡುತ್ತಿರುವ ವೈದ್ಯಾಧಿಕಾರಿಗಳನ್ನು ತಕ್ಷಣ ಸಸ್ಪೆಂಡ್ ಮಾಡಿ ಆ ಹುದ್ದೆಗಳಿಗೆ ಬೇರೆ ವೈದ್ಯರನ್ನು ನೇಮಿಸಿಕೊಳ್ಳಬೇಕು. ಕಳೆದ ಐದಾರು ವರ್ಷಗಳಿಂದ ಇದು ಕಾಮನ್ ಕೇಸ್ ಆಗಿದೆ. ಇಲಾಖೆಯ ಕಾರ್ಯದರ್ಶಿಗಳು ಹಾಗೂ ಡೈರಕ್ಟರೇಟ್ ಆಫೀಸ್‌ನವರೆಲ್ಲ ನಿದ್ದೆ ಮಾಡುತ್ತಿದ್ದಾರೆ. ದಯವಿಟ್ಟು ಅವರಿಗೆಲ್ಲಾ ಸರಿಯಾದ ಚಿಕಿತ್ಸೆ ಕೊಡುತ್ತೀರೋ ಇಲ್ಲವೋ ? ಈ ಬಗ್ಗೆ ನನಗೆ ನಿರ್ದಿಷ್ಟವಾದ ಉತ್ತರ ಬೇಕು.

ಶ್ರೀಮತಿ ಮನೋರಮಾ ವೀಧ್ವರಾಜ್.—ಮಾನ್ಯ ಸಭಾಧ್ಯಕ್ಷರೆ, ಈ ಪ್ರಕರಣ ಸರ್ವೋಚ್ಚ ನ್ಯಾಯಾಲಯದಲ್ಲಿರುವುದರಿಂದ ನಮ್ಮ ಲೋಕಸೇವಾ ಆಯೋಗದವರು ನಮ್ಮ ಇಲಾಖೆಯಿಂದ ಯಾವುದೇ ಪಟ್ಟಿಗಳನ್ನು ಲೆಕ್ಚರರ್ ಪೋಸ್ಟಿಗೆ ಬಿಡುಗಡೆ ಮಾಡಿದರೂ ಅವರು ಸೆಲೆಕ್ಟ್ ಮಾಡುವುದಕ್ಕೆ ತಯಾರಿಲ್ಲ.

ಡಾ॥ ಎಲ್. ಮಲಕರೆಡ್ಡಿ.—ನಾನು ಒಪ್ಪುತ್ತೇನೆ. ಅಸಿಸ್ಟೆಂಟ್ ಪ್ರೊಫೆಸರ್ಸ್ ಪೋಸ್ಟ್‌ಸ ೧೨, ಹಾಗೂ ಪ್ರೊಫೆಸರ್ಸ್ ಪೋಸ್ಟ್‌ಸ ೧೪ ಖಾಲಿ ಇದೆ ಎಂದು ಹೇಳಿದ್ದಾರೆ. ಅಲ್ಲಿ ಸ್ನಾತಕೋತ್ತರ ವ್ಯಾಸಂಗ ಕೂಡ ನಡೆಯುತ್ತದೆ. ಪ್ರೊಫೆಸರ್‌ಗಳಿಲ್ಲದೆ ಯಾವರೀತಿ ವಿದ್ಯಾಭ್ಯಾಸ ಇಲ್ಲಿ ನಡೆಯುತ್ತದೆ ? ಅದಕ್ಕೆ ತಕ್ಷಣ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ?

ಶ್ರೀಮತಿ ಮನೋರಮಾ ವೀಧ್ವರಾಜ್.—ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ.

ಬೀದರ್ ಜಿಲ್ಲೆಯಲ್ಲಿ ಕಬ್ಬು ಅರೆಯುವುದು.

೨೫೮ (ಎ)) ಡಾ॥ ವಿಜಯಕುಮಾರ್ ಖಂಡ್ರೆ (ಭಾಲ್ಕಿ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೀದರ್ ಜಿಲ್ಲೆಯಲ್ಲಿ ಕಬ್ಬು ಬೆಳೆಯುವ ಕ್ಷೇತ್ರದ ಒಟ್ಟು ವಿಸ್ತೀರ್ಣ (ದಯವಿಟ್ಟು ತಾಲ್ಲೂಕುವಾರ್ ಅಂಕಿ ಅಂಶಗಳನ್ನು ನೀಡುವುದು).

ಅ) ಬೀದರ್ ಸಹಕಾರ ಸಕ್ಕರೆ ಕಾರ್ಖಾನೆಯು ವಿಸ್ತರಣೆ ಹೊಂದಿದ ಮೇಲೆ ಆಗುವ ಕಬ್ಬಿನ ಅರೆಯುವ ಸಾಮರ್ಥ್ಯ,

ಇ) ಪರವಾನಗಿ ಅವಧಿಯು ಶೀಘ್ರದಲ್ಲಿ ಮುಗಿಯುವುದರಲ್ಲಿರುವುದರಿಂದ ವಿಸ್ತರಣಾ ಕಾರ್ಯ ಕ್ರಮವನ್ನು ಜಾರಿಗೊಳಿಸುವುದರಲ್ಲಿ ತೆಗೆದುಕೊಂಡ ಕ್ರಮಗಳೇನು ?

ಶ್ರೀಮತಿ ಮನೋರಮ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಸಚಿವರು).—

ಅ) ಬೀದರ್ ಜಿಲ್ಲೆಯಲ್ಲಿ ಕಬ್ಬು ಬೆಳೆಯುವ ವಿಸ್ತೀರ್ಣ ಈ ಕೆಳಗಿನಂತಿದೆ.—

	ತಾಲ್ಲೂಕು	ಕಬ್ಬು ಬೆಳೆಯುವ ಕ್ಷೇತ್ರದ ವಿಸ್ತೀರ್ಣ (ಹೆಕ್ಟೇರುಗಳಲ್ಲಿ)
೧.	ಬೀದರ್	೫೬೭೦
೨.	ಭಾಲ್ಕಿ	೨೧೪೦
೩.	ಬಸವ ಕಲ್ಯಾಣ	೩೯೫೫
೪.	ಔರಾದ್	೫೨೦
೫.	ಹುಮ್ನಾಬಾದ್	೫೮೫೫
	ಒಟ್ಟು	೧೭೧೬೦

ಆ) ದಿನ ಒಂದಕ್ಕೆ ೩.೫೦ ಮೆಟ್ರಿಕ್ ಟನ್ ಕಬ್ಬು ಅರೆಯುವ ಸಾಮರ್ಥ್ಯ ಪಡೆಯುತ್ತದೆ.

ಇ) ಈ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಡಾ. ವಿಜಯಕುಮಾರ್ ಖಂಡ್ರೆ.— ಮಾನ್ಯ ಅಧ್ಯಕ್ಷರೇ, ನಾನು ಏನು ಕೇಳಬೇಕೆಂದಿದ್ದೇನೆ ಅಂದರೆ ಇದುವರೆಗೆ ಎಕ್ಸ್‌ಪ್ಯಾನ್‌ಷನ್ ಕೆಲಸ ಏನು ಮುಂದುವರೆಯಬೇಕಾಗಿತ್ತೋ ಅದು ಇದುವರೆಗೂ ಏತಕ್ಕೆ ಆಗಿಲ್ಲ? ಇದು ಬೇಗ ಆಗುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀಮತಿ ಮನೋರಮ ಮಧ್ವರಾಜ್.— ಮಾನ್ಯ ಸಭಾಧ್ಯಕ್ಷರೆ, ಈ ಸಕ್ಕರೆ ಕಾರ್ಖಾನೆಗೆ ಷುಗರ್ ಡೆವಲಪ್‌ಮೆಂಟ್ ಫಂಡ್ ಲೋನ್ ೩೬೫.೮೦ ಲಕ್ಷ ರೂಪಾಯಿ ಸಿಗಬೇಕು. ಎನ್‌ಸಿಡಿಸಿಯಿಂದ ಲೋನ್ ಅಸಿಸ್ಟೆನ್ಸ್ ೭೩೦.೨ ಲಕ್ಷ ರೂಪಾಯಿ ಸಿಗಬೇಕು. ಇದರಲ್ಲಿ ಏನಾಗಿದೆ ಎಂದರೆ ಫ್ಯಾಕ್ಟರಿಯಿಂದ ಕಾಂಟ್ರಿಬ್ಯೂಷನ್ ೩೬೪.೧೮ ಲಕ್ಷ ರೂಪಾಯಿ ಬಂದರೆ ಕೂಡಲೇ ನಾವು ಗ್ಯಾರಂಟಿ ನಿಂತು ಶೀಘ್ರವಾಗಿ ಅಲ್ಲಿ ಕೆಲಸ ಪ್ರಾರಂಭ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ.

ಡಾ. ವಿಜಯಕುಮಾರ್ ಖಂಡ್ರೆ.— ಒಂದು ಸಲಹೆ ಕೊಡುತ್ತೇನೆ.

ಅಧ್ಯಕ್ಷರು.— ನೀವು ಸಲಹೆ ಕೊಡುವುದು ಬೇಡ. ಉತ್ತರ ತೆಗೆದುಕೊಳ್ಳಬೇಕು. ಡಿಮ್ಯಾಂಡ್ಸ್ ಬಂದಾಗ ಸಲಹೆ ಕೊಡಿ. ಈಗ ಮಾನ್ಯ ಶಿವರಾಮೇಗೌಡರು ತಮ್ಮ ಪ್ರಶ್ನೆ ಕೇಳಲಿ.

ನಾಗಮಂಗಲ ತಾಲ್ಲೂಕಿನಲ್ಲಿರುವ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆ

೭೦. ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ).— ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಮತ್ತು ಪಶು ಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗಮಂಗಲ ತಾಲ್ಲೂಕಿನಲ್ಲಿ ಕಣ್ವ ನೀರಾವರಿ ಮತ್ತು ಎನ್.ಆರ್.ಡಬ್ಲ್ಯೂ.ಎಸ್. ಯೋಜನೆಗಳ ಅಡಿಯಲ್ಲಿ ಈಗಾಗಲೇ ಕೈಗೆತ್ತಿಕೊಳ್ಳಲಾಗಿರುವ ಯೋಜನೆಗಳು ಎಷ್ಟು?

ಆ) ನಾಗಮಂಗಲ ತಾಲ್ಲೂಕಿನಲ್ಲಿ ೧೯೯೦-೯೧ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗುವ ಹೊಸ ಯೋಜನೆಗಳು ಎಷ್ಟು?